It is clarified that "Hydraulic Hand Pallet Truck" is liable to entry tax @ 2% as machinery of all kinds as per Sl. No. 7 of the Table in Notification No. FD 11 CET 2002, dated 30-03-2012.

P.R. 742
SC-25

RITVIK PANDEY
Commissioner of Commercial Taxes,
(Karnataka) Bengaluru.

COMMERCIAL TAXES DEPARTMENT

OFFICE OF THE COMMISSIONER OF COMMERCIAL TAXES, (KARNATAKA), BENGALURU- CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Present: SRI. RITVIK PANDEY, IAS,
Commissioner of Commercial Taxes. (K)

Sub: KVAT Act, 2003- Clarification on VAT rate of Commodity: BRAIDED CORD - Reg.

Ref: Application dated 27-04-2015 of Supreme Textiles, Bengaluru (TIN - 29940473340).

In the application cited above of M/s. Supreme Textiles, No. 88/4, Kupendra Reddy Industrial Layout, Singasandra, Hosur Road, Bengaluru - 560 068, TIN - 29940473340 has sought clarification regarding the rate of tax applicable on "braided cord".

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence, the following clarification is issued.

CLARIFICATION NO. CLR.CR.17/2015-16, DATED: 14-07-2015

It is clarified that "braided cord" is liable to VAT @ 14.5% as unscheduled goods under Section 4(1){b}{iii) of the Karnataka Value Added Tax Act, 2003.

P.R. 743
SC-25

RITVIK PANDEY
Commissioner of Commercial Taxes,
(Karnataka) Bengaluru.

OFFICE OFTHE CITY CIVIL COURT, BENGALURU

NOTIFICATION

No. ADM-I (E)2316 /2015, Bengaluru, Dated : July 21,2015.

Sri K. Nagaraju, Asst. Registrar, City Civil Court, Bengaluru is granted 7 days of earned leave for the period from 4.4.2015 to 10.4.2015 with permission to avail general holidays on 11.4.2015 & 12.4.2015, on personal ground.

Sri H. G. Honnagangadharaiah, Asst. Registrar, City Civil Court, Bengaluru is placed in additional charge of Sri K. Nagaraju, Asst. Registrar, City Civil Court, Bengaluru, during the above leave period.

Sri K. Nagaraju, Asst. Registrar, City Civil Court, Bengaluru would have continued in the same post, but for proceedings on leave.

P.R. 744

BY ORDER OF THE PRL. CITY CIVIL & SESSIONS JUDGE, BENGALURU
Registrar I/C
City Civil Court, Bengaluru.

OFFICE OFTHE CITY CIVIL COURT, BENGALURU

NOTIFICATION

No. ADM-I (E)2314 /2015, Bengaluru, Dated : July 21,2015.

Smt. T. Manjula, Asst. Registrar, City Civil Court, Bengaluru is granted 8 days of earned leave for the period from 16.5.2015 to 23.5.2015, on medical ground.

Smt. Shashikala S., Sheristedar, Family Court, Bengaluru is placed in additional charge of Smt. T. Manjula, Asst. Registrar, City Civil Court, Bengaluru, during the above leave period.

Smt. T. Manjula, Asst. Registrar, City Civil Court, Bengaluru would have continued in the same post, but for proceedings on leave.

P.R. 745

BY ORDER OF THE PRL. CITY CIVIL & SESSIONS JUDGE, BENGALURU
Registrar I/C
City Civil Court, Bengaluru.

OFFICE OFTHE CITY CIVIL COURT, BENGALURU

NOTIFICATION

No. ADM-I (E)2308 /2015, Bengaluru, Dated : July 20,2015.

Smt. T. Manjula, Asst. Registrar, City Civil Court, Bengaluru is granted 13 days of earned leave for the period from 24.11.2014 to 6.12.2014 with permission to avail general holidays on 23.11.2014 and 7.12.2014, on medical ground.

Sri T. Neelendra Naik, Asst. Registrar, City Civil Court, Bengaluru is placed in additional charge of Smt. T. Manjula, Asst. Registrar, City Civil Court, Bengaluru, during the above leave period.

Smt. T. Manjula, Asst. Registrar, City Civil Court, Bengaluru would have continued in the same post, but for proceedings on leave.

P.R. 746

BY ORDER OF THE PRL. CITY CIVIL & SESSIONS JUDGE, BENGALURU
Registrar
City Civil Court, Bengaluru.

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಾರಿಇ : 80 : ಸ್ವೀರಸ : 2015, ಬೆಂಗಳೂರು, ದಿನಾಂಕ : 20–07–2015

ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 4(1) (ಎ) ಮತ್ತು 4(1)(ಬಿ) (2005ರ ಕೇಂದ್ರ ಅಧಿನಿಯಮ ಸಂಖ್ಯೆ (22) ರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರ ಸಚಿವಾಲಯದ ಸಾರಿಗೆ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಅನುಬಂಧಿಸಿ ಜನಸಾಮಾನ್ಯರ ಮಾಹಿತಿಗಾಗಿ ಈ ಕೆಳಕಂಡಂತೆ ಪ್ರಕಟಿಸಲಾಗುತ್ತಿದೆ.

ಸದರಿ ಮಾಹಿತಿಗಳು ಇಲಾಖೆಯ ವೆಬ್‌ಸೈಟ್ :www.karnataka.gov.in/transport:secretariat/ ರಲ್ಲಿಯೂ ಸಹ ಲಭ್ಯವಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಬೀರೇಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 4(1) (ಬಿ)ರ ಪಾಲನೆಗೆ ಸಂಬಂಧಿಸಿದಂತೆ ಮಾಹಿತಿ

(i) ಸಾರಿಗೆ ಇಲಾಖೆಯ (ಕರ್ನಾಟಕ ಸರ್ಕಾರದ ಸಚಿವಾಲಯದ) ಪ್ರಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:

ಸಾರಿಗೆ ಇಲಾಖೆ ಸಚಿವಾಲಯದ ವ್ಯವಹಾರಗಳನ್ನು ಈ ಮುಂದಿನ ಶಾಖೆಗಳ ಮೂಲಕ ಅಂದರೆ,

1) ರಾಜ್ಯ ಸಾರಿಗೆ ಉದ್ಯಮಗಳ ಶಾಖೆ.
2) ಮೋಟಾರು ವಾಹನಗಳ ಶಾಖೆ.
3) ಆಂತರಿಕ ಆರ್ಥಿಕ ಸಲಹೆಗಾರರು.
4) ಕಾನೂನು ಕೋಶ–ಇವುಗಳ ಮೂಲಕ ನಡೆಸಲಾಗುತ್ತದೆ.

ಸಾರಿಗೆ ಸಚಿವಾಲಯದ ಅಧೀನದಲ್ಲಿ, ಸಾರಿಗೆ ಇಲಾಖೆ, ಆಯುಕ್ತರ ಕಛೇರಿ ಮತ್ತು ನಾಲ್ಕು ರಾಜ್ಯ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ಲಿ., (ಡಿಡಿಯುಟಿಟಿಎಲ್) ಎಂದು ಕರೆಯಲಾಗುವ ಒಂದು ಟ್ರಕ್ ಟರ್ಮಿನಲ್ ಅನ್ನು ಹೊಂದಿದೆ.

ಸಾರಿಗೆ ಸಚಿವಾಲಯವು ಸಾರಿಗೆ ವಿಷಯ ಮಾರ್ಗಸೂಚಿಗಳಿಗೆ ಸಂಬಂಧಿಸಿದ ಸೂಚನೆ ಮುಂತಾದವುಗಳನ್ನು ಹೊರಡಿಸುತ್ತದೆ.

ಸಾರ್ವಜನಿಕ ಉದ್ದೇಶವನ್ನು ಹೊಂದಿರುವ ಸರ್ಕಾರಿ ನೀತಿಗಳು, ಧ್ಯೇಯೋದ್ದೇಶಗಳನ್ನು ಸಾರಿಗೆ ಸಚಿವಾಲಯದ ಮೂಲಕ ನಿರ್ವಹಿಸಲಾಗುತ್ತದೆ ಮತ್ತು ಅವುಗಳನ್ನು ಸಾರಿಗೆ ಇಲಾಖೆಯ ಮೂಲಕ ಹಾಗೂ ಐದು ರಾಜ್ಯ ಸಾರಿಗೆ ಉದ್ದಿಮೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.

ಸಾರಿಗೆ ಇಲಾಖೆಯು ಅನುಷ್ಠಾನಗೊಳಿಸಬೇಕಾದ ಹೊಸ ಯೋಜನಾ ಕಾರ್ಯಕ್ರಮಗಳಿಗೆ ಸಾರಿಗೆ ಇಲಾಖೆಯಲ್ಲಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಅನುಷ್ಠಾನಗೊಳಿಸಲಾಗುವುದು.

ಸಾರಿಗೆ ಸಚಿವಾಲಯದಲ್ಲಿನ ಪ್ರಕಾರ್ಯಗಳನ್ನು ಈ ಮುಂದಿನ ಅಧಿನಿಯಮಗಳು ಮತ್ತು ನಿಯಮಗಳಿಗೆ ಅನುಸಾರವಾಗಿ ಆಚರಣೆಗೆ ತರಲಾಗುತ್ತಿದೆ. :–

1) ಕೇಂದ್ರ ಮೋಟಾರು ವಾಹನ ಅಧಿನಿಯಮ, 1988 ಮತ್ತು ನಿಯಮಗಳು
2) ಕರ್ನಾಟಕ ಮೋಟಾರು ವಾಹನ ನಿಯಮಗಳು, 1989.
3) ಕೇಂದ್ರ ಮೋಟಾರು ವಾಹನ ತೆರಿಗೆ ನಿರ್ಧರಣೆ, ಅಧಿನಿಯಮಗಳು, 1957.
4) ರಸ್ತೆ ಸಾರಿಗೆ ನಿಗಮ ಅಧಿನಿಯಮ, 1950.
5) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961.

ಸಾರಿಗೆ ಸಚಿವಾಲಯದ ಮೂಲಕ ಸರ್ಕಾರವು, ಮೇಲ್ಕಂಡ ಅಧಿನಿಯಮಗಳು ಮತ್ತು ನಿಯಮಗಳಲ್ಲಿರುವ ಚಲಾಯಿಸಬಹುದಾದ ಅಧಿಕಾರಿಗಳ ಪ್ರಕಾರ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ.

ಸಾರಿಗೆ ಆಯುಕ್ತರ ನಿಯೋಜಿತ ಅಧಿಕಾರಗಳನ್ನು ಚಲಾಯಿಸಲಿಕ್ಕಾಗದಿರುವಂತಹ ಮತ್ತು ಸಾರಿಗೆ ಆಯುಕ್ತರ ನಿಯೋಜಿತ ಅಧಿಕಾರಗಳನ್ನು ಮೀರಿರುವಂತಹ ನೌಕರರ ಮತ್ತು ಅಧಿಕಾರಿಗಳ ಸೇವಾ ವಿಷಯಗಳಿಗೆ ಸಂಬಂಧಿಸಿದ ಕಾರ್ಯವನ್ನು ಸಾರಿಗೆ ಸಚಿವಾಲಯದಲ್ಲಿ ನಿರ್ವಹಿಸಲಾಗುತ್ತದೆ.

ರಾಜ್ಯ ಸಾರಿಗೆ ಉದ್ದಿಮೆಗಳ ಪ್ರಕಾರ್ಯಗಳನ್ನು ರಸ್ತೆ ಸಾರಿಗೆ ಅಧಿನಿಯಮ, 1950 ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961ರ ಅಡಿಯಲ್ಲಿ ನಿರ್ವಹಿಸಲಾಗುತ್ತದೆ. ಹಾಗೂ ಹಣಕಾಸಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಮತ್ತು ಸರ್ಕಾರವು ನಿರ್ವಹಿಸಬೇಕಾದ ಎಲ್ಲಾ ಪ್ರಕಾರ್ಯಗಳನ್ನು ರಸ್ತೆ ಸಾರಿಗೆ ನಿಗಮ ಅಧಿನಿಯಮ. 1950ರ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961ರ ಅನುಸಾರ ಸಾರಿಗೆ ಸಚಿವಾಲಯದಲ್ಲಿ ನಿರ್ವಹಿಸಲಾಗುತ್ತಿದೆ.

ಸಾರಿಗೆ ಸಚಿವಾಲಯದ ಆಡಳಿತ ಮುಖ್ಯಸ್ಥರು ಪ್ರಧಾನ ಕಾರ್ಯದರ್ಶಿಯವರಾಗಿದ್ದು, ಇವರಿಗೆ ಶ್ರೇಣಿ–1 ರ (ಹಿರಿಯ ಶ್ರೇಣಿ) ದರ್ಜೆಯ ಮೂವರು ಅಧಿಕಾರಿಗಳು ಆಡಳಿತದಲ್ಲಿ ನೆರವು ನೀಡುತ್ತಾರೆ. ಆ ಅಧಿಕಾರಿಗಳೆಂದರೆ:

1) **ಉಪಕಾರ್ಯದರ್ಶಿ:** ಇವರು ಸಾರಿಗೆ ಇಲಾಖೆಯ ಸೇವಾ ವಿಷಯಗಳಿಗೆ ಮತ್ತು ಟೆಂಡರ್ ಬುಲೆಟಿನ್ನುಗಳಿಗೆ ಹಾಗೂ ಇತರ ಎಲ್ಲಾ ತತ್ಸಂಬಂಧಿತ ವಿಷಯಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೆರವು ನೀಡುತ್ತಾರೆ.
2) **ಉಪ ಕಾರ್ಯದರ್ಶಿ ಹಾಗೂ ಆಂತರಿಕ ಹಣಕಾಸು ಸಲಹೆಗಾರರು (ಐಎಫ್‌ಎ):** ಇವರು ಹಣಕಾಸು ವಿಷಯಗಳಲ್ಲಿ ನೆರವು ನೀಡುತ್ತಾರೆ.
3) **ಉಪ ಕಾರ್ಯದರ್ಶಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು:** ಇವರುಗಳು ಕಾನೂನು ವಿಷಯಗಳಲ್ಲಿ ನೆರವು ನೀಡುತ್ತಾರೆ.

ಉಪಕಾರ್ಯದರ್ಶಿಯವರು, ತಮ್ಮ ಅಧೀನದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳ ವಿಷಯಗಳನ್ನು ನಿರ್ವಹಿಸುವ ಒಬ್ಬ ಅಧೀನ ಕಾರ್ಯದರ್ಶಿ (ಶ್ರೇಣಿ–1 ಕಿರಿಯ ಶ್ರೇಣಿ) ಹಾಗೂ ಸಾರಿಗೆ ಇಲಾಖೆಯ ವಿಷಯಗಳನ್ನು ನಿರ್ವಹಿಸುವ ಒಬ್ಬ ಪೀಠಾಧಿಕಾರಿ, ಇಬ್ಬರು ಶಾಖಾಧಿಕಾರಿಗಳು (ಶ್ರೇಣಿ–2) ಅವರನ್ನು ಹೊಂದಿದ್ದಾರೆ.

ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರಿಗೆ i) ಹಣಕಾಸು ವಿಷಯವಾಗಿ ಅಭಿಪ್ರಾಯವನ್ನು ನೀಡುವಲ್ಲಿ; ಮತ್ತು ii) ಆಯವ್ಯಯ ಮತ್ತು ಲೆಕ್ಕ ಪರಿಶೋಧನೆ ವಿಷಯಗಳಲ್ಲಿ ಇಬ್ಬರು ಶಾಖಾಧಿಕಾರಿಗಳು ನೆರವು ನೀಡುವರು.

ಕಾನೂನು ಕೋಶದ ಮುಖ್ಯಸ್ಥರು ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಯವರಿಗೆ ಒಬ್ಬರು ಅಧೀನ ಕಾರ್ಯದರ್ಶಿಯವರು ನೆರವು ನೀಡುತ್ತಾರೆ.

(ಚಾರ್ಟ್ ಲಗತ್ತಿಸಿದೆ)

ಸಾರಿಗೆ ಇಲಾಖೆಯ ರಚನೆಯ ಚಾರ್ಟ್

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಾರಿಗೆ ಇಲಾಖೆ

ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು

ಸರ್ಕಾರದ ಉಪ ಕಾರ್ಯದರ್ಶಿ → ಸರ್ಕಾರದ ಅಧೀನ ಕಾರ್ಯದರ್ಶಿ

ಉಪ ಕಾರ್ಯದರ್ಶಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು → ಅಧೀನ ಕಾರ್ಯದರ್ಶಿ

ಶಾಖಾಧಿಕಾರಿ(ಅಭಿಪ್ರಾಯ)	1	ಶಾಖಾಧಿಕಾರಿ(ಆಯವ್ಯಯ)	1	ಶಾಖಾಧಿಕಾರಿ(ಸಾರಿಗೆ–1)	1	ಪೀಠಾಧಿಕಾರಿ(ಸಾರಿಗೆ–2)	1	ಶಾಖಾಧಿಕಾರಿ (ಸಮನ್ವಯ)	1	ಶಾಖಾಧಿಕಾರಿ	1
ಹಿರಿಯ ಸಹಾಯಕ	2	ಹಿರಿಯ ಸಹಾಯಕ	1	ಹಿರಿಯ ಸಹಾಯಕ	1	ಹಿರಿಯ ಸಹಾಯಕ	1	ಹಿರಿಯ ಸಹಾಯಕ	–	ಹಿರಿಯ ಸಹಾಯಕ	–
ಸಹಾಯಕ	1	ಸಹಾಯಕ	2	ಸಹಾಯಕ	2	ಸಹಾಯಕ	2	ಸಹಾಯಕ	1	ಸಹಾಯಕ	1
ಕಿರಿಯ ಸಹಾಯಕ	1	ಕಿರಿಯ ಸಹಾಯಕ	–	ಕಿರಿಯ ಸಹಾಯಕ	–	ಕಿರಿಯ ಸಹಾಯಕ	1	ಕಿರಿಯ ಸಹಾಯಕ	2	ಕಿರಿಯ ಸಹಾಯಕ	–
ಬೆರಳಚ್ಚುಗಾರ	1	ಬೆರಳಚ್ಚುಗಾರ	1	ಬೆರಳಚ್ಚುಗಾರ	1	ಬೆರಳಚ್ಚುಗಾರ	1	ಬೆರಳಚ್ಚುಗಾರ	1	ಬೆರಳಚ್ಚುಗಾರ	1
ಗ್ರೂಪ್ ಡಿ	1	ಗ್ರೂಪ್ ಡಿ	1	ಗ್ರೂಪ್ ಡಿ	1	ಗ್ರೂಪ್ ಡಿ	1	ಗ್ರೂಪ್ ಡಿ	2	ಗ್ರೂಪ್ ಡಿ	1

(ii) ಸಾರಿಗೆ ಸಚಿವಾಲಯದ ಅಧಿಕಾರಿಗಳು ಮತ್ತು ನೌಕರರ ಅಧಿಕಾರಗಳು ಮತ್ತು ಕರ್ತವ್ಯಗಳು :

ಎ) **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ:** ಇವರು ಸಾರಿಗೆ ಸಚಿವಾಲಯ (ಸರ್ಕಾರ)ದ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಇವರು ಕರ್ನಾಟಕದಲ್ಲಿನ ಸಾರಿಗೆ ವಲಯದ ಎಲ್ಲಾ ವಿಷಯಗಳ ಸಂಬಂಧದಲ್ಲಿ, ವಿಶೇಷವಾಗಿ ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ), ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ವಿಷಯಗಳ ಸಂಬಂಧದಲ್ಲಿ ಪ್ರಭಾರ ಹೊಂದಿರುತ್ತಾರೆ. ಇವರು ಮಾನ್ಯ ಸಾರಿಗೆ ಸಚಿವರು ಅಥವಾ ಸರ್ಕಾರದ ನಿರ್ದೇಶನಗಳಿಗನುಗುಣವಾಗಿ ಮತ್ತು ಆದೇಶಗಳ ಮೇರೆಗೆ ಅಥವಾ ಸಂದರ್ಭಾನುಸಾರ ಸಾಮಾನ್ಯ ಕ್ರಮದಲ್ಲಿ ಕಾರ್ಯನಿರ್ವಹಿಸುತ್ತಾರೆ. ಇವರು ತಮ್ಮ ಅಡಿಯಲ್ಲಿ ಬರುವ ಸಾರಿಗೆ ಇಲಾಖೆ ಮತ್ತು ನಾಲ್ಕು ರಾಜ್ಯ ಸಾರಿಗೆ ಉದ್ಯಮಗಳು ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳಲ್ಲಿ ನಿರ್ವಹಿಸಲಾಗುತ್ತಿರುವ ಕೆಲಸದ ಸಮಗ್ರ ಪ್ರಭಾರವನ್ನು ಹೊಂದಿರುತ್ತಾರೆ. ಇವರು ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಮತ್ತು ಪ್ರಕರಣಗಳನ್ನು ವಿಲೇ ಮಾಡುವಲ್ಲಿ ಸಂದರ್ಭಾನುಸಾರ, ಮಾನ್ಯ ಸಾರಿಗೆ ಸಚಿವರು ಅಥವಾ ಸರ್ಕಾರಕ್ಕೆ ನೆರವು ನೀಡುತ್ತಾರೆ ಮತ್ತು ಸಲಹೆ ಕೊಡುತ್ತಾರೆ.

ಬಿ) **ಸರ್ಕಾರದ ಉಪ ಕಾರ್ಯದರ್ಶಿ:** ಇವರು ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ)ಗೆ ಸಂಬಂಧಪಟ್ಟ ವಿಷಯಗಳ ಕುರಿತಾಗಿ ಕಾರ್ಯ ನಿರ್ವಹಿಸುವಲ್ಲಿ ಕಾರ್ಯದರ್ಶಿಗೆ ನೆರವಾಗುತ್ತಾರೆ ಮತ್ತು ಸಾರಿಗೆ ಸಚಿವಾಲಯದ ಸಮಗ್ರ ಉಸ್ತುವಾರಿ ನೋಡಿಕೊಳ್ಳುತ್ತಾರೆ.

ಸಿ) **ಉಪ ಕಾರ್ಯದರ್ಶಿ ಮತ್ತು ಆಂತರಿಕ ಹಣಕಾಸು ಸಲಹೆಗಾರರು:** ಇವರು ಹಣಕಾಸು ಸಂಬಂಧಿತ ವಿಷಯಗಳಲ್ಲಿ ಕಾರ್ಯದರ್ಶಿಗೆ ಸಲಹೆ ನೀಡುತ್ತಾರೆ. ಇವರು ಸಾರಿಗೆ ಇಲಾಖೆಯ ಬಜೆಟ್ ಸಿದ್ದಪಡಿಸುತ್ತಾರೆ. ಸಾರಿಗೆ ಇಲಾಖೆ ಮತ್ತು ಸಾರಿಗೆ ಇಲಾಖೆಯ ಅಧೀನದಲ್ಲಿ ಬರುವ 5 ಸಂಸ್ಥೆಗಳ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ವಿಷಯಗಳಲ್ಲಿ ಇವರು ಹೊಣೆಗಾರರಾಗಿರುತ್ತಾರೆ.

ಡಿ) ಉಪಕಾರ್ಯದರ್ಶಿ ಮತ್ತು ಕಾನೂನು ಕೋಶದ ಮುಖ್ಯಸ್ಥ: ಇವರು ಕಾನೂನು ಸಂಬಂಧಿತ ವಿಷಯಗಳಲ್ಲಿ ಕಾರ್ಯದರ್ಶಿಗೆ ಸಲಹೆ ನೀಡುತ್ತಾರೆ.

ಇ) **ಸರ್ಕಾರದ ಅಧೀನ ಕಾರ್ಯದರ್ಶಿ:** ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ), ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಉಪ ಕಾರ್ಯದರ್ಶಿಗೆ ನೆರವಾಗುತ್ತಾರೆ ಮತ್ತು ಕಡತಗಳನ್ನು ಸಲ್ಲಿಸುತ್ತಾರೆ. ಇವರು ಸಾಮಾನ್ಯವಾಗಿ ಪ್ರಧಾನ ಕಾರ್ಯದರ್ಶಿಯವರ ಮತ್ತು ಉಪ ಕಾರ್ಯದರ್ಶಿಯವರ ಆದೇಶಗಳನ್ವಯ ಕಾರ್ಯನಿರ್ವಹಿಸುತ್ತಾರೆ. ಇವರು ಕಡತಗಳಲ್ಲಿರುವ ಆದೇಶಗಳ ಪ್ರಕಾರ ಪತ್ರಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು ಮುಂತಾದವುಗಳನ್ನು ಹೊರಡಿಸುತ್ತಾರೆ. ಇವರು ತಮಗೆ ವಹಿಸಿದ ಕಾರ್ಯವನ್ನು ಕಾನೂನಿನ ಅನುಸಾರ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರು ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇವರು, ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ರಾಜ್ಯ ಸಾರ್ವಜನಿಕ ಮಾಹಿತಿಯ ಮೊದಲ ಮೇಲ್ಮನವಿ ಪ್ರಾಧಿಕಾರವೂ ಸಹ ಆಗಿರುತ್ತಾರೆ.

ಎಫ್) ಅಧೀನ ಕಾರ್ಯದರ್ಶಿ(ಕಾನೂನು ಕೋಶ): ಇವರು ಕಾನೂನು ವಿಷಯಗಳಿಗೆ, ನ್ಯಾಯಾಲಯದ ವಿಷಯಗಳಿಗೆ ಸಂಬಂಧಪಟ್ಟಂತೆ ಸಾರಿಗೆ ಇಲಾಖೆಯ ಕಡತಗಳನ್ನು ಸಿದ್ದಪಡಿಸಿ ಮಂಡಿಸುವಲ್ಲಿ ಕಾನೂನು ಕೋಶದ ಮುಖ್ಯಸ್ಥರಿಗೆ ನೆರವಾಗುತ್ತಾರೆ. ಇವರು ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಜಿ) **ಶಾಖಾಧಿಕಾರಿಗಳು:**

(i) ಪೀಠಾಧಿಕಾರಿ (ಮೋಟಾರು ವಾಹನಗಳ ಶಾಖೆ): ಇವರು ಶಾಖೆಯ ಪ್ರಭಾರದಲ್ಲಿರುತ್ತಾರೆ. ಇವರು ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿ ಗೊತ್ತುಪಡಿಸಿದ ಕಾರ್ಯವಿಧಾನದ ಪ್ರಕಾರ ವಿಷಯ ನಿರ್ವಾಹಕರು ಸಲ್ಲಿಸಿದ ಕಡತಗಳು/ಪತ್ರಗಳನ್ನು ಪರಿಶೀಲಿಸುತ್ತಾರೆ. ಇವರು ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ)ಗೆ ಸಂಬಂಧಪಟ್ಟ ವಿಷಯಗಳಲ್ಲಿ ಮತ್ತು ಇತರ ಸಾರಿಗೆ ವಿಷಯಗಳಲ್ಲಿ ಅಧೀನ ಕಾರ್ಯದರ್ಶಿಗೆ ನೆರವಾಗುತ್ತಾರೆ ಮತ್ತು ಕಡತಗಳನ್ನು ಸಲ್ಲಿಸುತ್ತಾರೆ. ಇವರು ಸಿ ಮತ್ತು **ಡಿ** ವರ್ಗಗಳಿಗೆ ಸಂಬಂಧಿಸಿದಂತೆ ಕಡತಗಳಲ್ಲಿರುವ ಆದೇಶಗಳ ಪ್ರಕಾರ ಪತ್ರಗಳು, ಸುತ್ತೋಲೆಗಳು, ಸರ್ಕಾರಿ ಆದೇಶಗಳು ಮುಂತಾದವುಗಳನ್ನು ಹೊರಡಿಸುತ್ತಾರೆ. ಇವರು ತಮಗೆ ವಹಿಸಿದ ಕಾರ್ಯವನ್ನು ಕಾನೂನಿನ ಅನುಸಾರ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಇವರು ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿ ನಮೂದಿಸಲಾದಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಇವರು ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯೂ ಸಹ ಆಗಿರುತ್ತಾರೆ.

(ii) ಶಾಖಾಧಿಕಾರಿ (ರಾಜ್ಯ ಸಾರಿಗೆ ಉದ್ಯಮಗಳ ಶಾಖೆ): ಇವರು ಸದರಿ ಶಾಖೆಯ ಪ್ರಭಾರದಲ್ಲಿರುತ್ತಾರೆ. ಇವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿ., ಇವುಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿರ್ವಹಿಸುತ್ತಾರೆ. ಇವರು ವಿಷಯ ನಿರ್ವಾಹಕರು ಸಲ್ಲಿಸುವ ಕಡತಗಳನ್ನು ಪರಿಶೀಲಿಸಿ ಅಧೀನ ಕಾರ್ಯದರ್ಶಿಗಳಿಗೆ ಸಲ್ಲಿಸುತ್ತಾರೆ. ಇವರು ಕರ್ನಾಟಕ ಸಚಿವಾಲಯದ ಕೈಪಿಡಿಯಲ್ಲಿ ನಮೂದಿಸಿರುವಂತಹ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ಇವರು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸಹ ಆಗಿರುತ್ತಾರೆ.

(iii) ಶಾಖಾಧಿಕಾರಿ, ಸ್ವೀಕೃತಿಗಳು, ರವಾನೆ ಮತ್ತು ಸಮನ್ವಯ: ಇವರು ಶಾಖೆಯ ಪ್ರಭಾರದಲ್ಲಿರುತ್ತಾರೆ. ಇವರು ಸ್ವೀಕೃತಿಗಳು, ಪ್ರಕಟಣೆಗಳು ಮತ್ತು ಸಮನ್ವಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ನಿರ್ವಹಿಸುತ್ತಾರೆ. ಸಾರಿಗೆ ಸಚಿವಾಲಯಕ್ಕೆ ಸಂಬಂಧಪಟ್ಟ ವಿವಿಧ ಸಭೆಗಳನ್ನು ನಡೆಸುವಲ್ಲಿ ಉಪ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿಗೆ ಇವರು ನೆರವು ನೀಡುತ್ತಾರೆ. ಇವರು ಒಂದಕ್ಕಿಂತ ಹೆಚ್ಚಿನ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಹ ನಿರ್ವಹಿಸುತ್ತಾರೆ. ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕಾರ ಇವರು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸಹ ಆಗಿರುತ್ತಾರೆ.

(iv) ಶಾಖಾಧಿಕಾರಿ (ಆಂತರಿಕ ಹಣಕಾಸು ಸಲಹೆ, ಅಭಿಪ್ರಾಯ): ಇವರು ಅಧೀನ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ಅಥವಾ ಕಾರ್ಯದರ್ಶಿಗಳು ಆಂತರಿಕ ಹಣಕಾಸು ಸಲಹೆಗಾರರಿಗೆ ಕಳುಹಿಸಿದ ಹಣಕಾಸಿನ ವಿಷಯಗಳಿಗೆ ಸಂಬಂಧಪಟ್ಟಂತೆ ಸಾರಿಗೆ ವಿಭಾಗದ ಪ್ರಕರಣಗಳನ್ನು ಪರಿಶೀಲಿಸುವಲ್ಲಿ ಮತ್ತು ಸಿದ್ದಪಡಿಸಿ ಒಪ್ಪಿಸುವಲ್ಲಿ ಆಂತರಿಕ ಹಣಕಾಸು ಸಲಹೆಗಾರರಿಗೆ ನೆರವು ನೀಡುತ್ತಾರೆ. ಇವರು ಅಸ್ತಿತ್ವದಲ್ಲಿರುವ

ನಿಯಮಗಳು/ಕಾನೂನುಗಳಿಗೆ ಸಂಬಂಧಪಟ್ಟಂತೆ ಮತ್ತು ಹಣಕಾಸು ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರಕರಣಗಳನ್ನು ಪರಿಶೀಲಿಸಿ ಕಡತಗಳನ್ನು ಆಂತರಿಕ ಹಣಕಾಸು ಸಲಹೆಗಾರರಿಗೆ ಸಲ್ಲಿಸುತ್ತಾರೆ. ಇವರು ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿ ನಮೂದಿಸಿರುವಂತೆ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

(v) ಶಾಖಾಧಿಕಾರಿ (ಆಂತರಿಕ ಹಣಕಾಸು ಸಲಹೆ, ಬಜೆಟ್): ಇವರು ಸಾರಿಗೆ ಇಲಾಖೆಯ ಬಜೆಟ್ ಅನ್ನು ಸಿದ್ದಪಡಿಸುವಲ್ಲಿ ಆಂತರಿಕ ಹಣಕಾಸು ಸಲಹೆಗಾರರಿಗೆ ನೆರವು ನೀಡುತ್ತಾರೆ. ಇವರು ಸಾರಿಗೆ ಸಚಿವಾಲಯದ ಅಡಿಯಲ್ಲಿ ಬರುವ ಎಲ್ಲಾ ಘಟಕಗಳ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ವಿಷಯಗಳಿಗೆ ಸಂಬಂಧಪಟ್ಟಂತೆಯೂ ಸಹ ಆಂತರಿಕ ಹಣಕಾಸು ಸಲಹೆಗಾರರಿಗೆ ನೆರವು ನೀಡುತ್ತಾರೆ. ಇವರು ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿ ನಮೂದಿಸಿರುವಂತೆ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಹೆಚ್) ವಿಷಯ ನಿರ್ವಾಹಕರು: ಮೋಟಾರು ವಾಹನಗಳ ಶಾಖೆಯಲ್ಲಿ ಒಬ್ಬ ಹಿರಿಯ ಸಹಾಯಕ ಹಾಗೂ ಒಬ್ಬ ಸಹಾಯಕ ಇರುತ್ತಾರೆ. ರಾಜ್ಯ ಸಾರಿಗೆ ನಿಗಮದ ಶಾಖೆಯಲ್ಲಿ ಒಬ್ಬ ಹಿರಿಯ ಸಹಾಯಕ ಹಾಗೂ ಇಬ್ಬರು ಸಹಾಯಕರು ಇರುತ್ತಾರೆ. ಶಾಖಾಧಿಕಾರಿ, ಸ್ವೀಕೃತಿ ರವಾನೆ ಶಾಖೆಗೆ ಒಬ್ಬ ಸಹಾಯಕ, ಇಬ್ಬರು ಕಿರಿಯ ಸಹಾಯಕರು ಇರುತ್ತಾರೆ. ಒಬ್ಬ ಸಹಾಯಕ ಹಾಗೂ ಒಬ್ಬ ಕಿರಿಯ ಸಹಾಯಕ ಹುದ್ದೆಯು ಖಾಲಿ ಇರುತ್ತದೆ. ಆಂತರಿಕ ಹಣಕಾಸು ಸಲಹೆಗಾರರು, ಅಭಿಪ್ರಾಯ ಇವರಿಗೆ ಇಬ್ಬರು ಹಿರಿಯ ಸಹಾಯಕರು ಹಾಗೂ ಒಬ್ಬ ಸಹಾಯಕರು ಇರುತ್ತಾರೆ ಹಾಗೂ ಆಂತರಿಕ ಹಣಕಾಸು ಸಲಹೆಗಾರರು, ಬಜೆಟ್ ಇವರಿಗೆ ಒಬ್ಬ ಹಿರಿಯ ಸಹಾಯಕ ಮತ್ತು ಇಬ್ಬರು ಸಹಾಯಕರು ಇರುತ್ತಾರೆ. ಅವರು ತಮಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಅವರು ಜಾರಿಯಲ್ಲಿರುವ ನಿಯಮಗಳು/ಅಧಿನಿಯಮಗಳು ಮತ್ತು ಕಾನೂನು ಇತ್ಯಾದಿಗಳ ಪ್ರಕಾರ ಪ್ರಸ್ತಾವನೆಗಳನ್ನು/ಸ್ವೀಕೃತಿಗಳನ್ನು ಪರಿಶೀಲಿಸಿ, ಕರ್ನಾಟಕ ಸಚಿವಾಲಯ ಕೈಪಿಡಿಯ ಪ್ರಕಾರ ಕಡತಗಳಲ್ಲಿ ಟಿಪ್ಪಣಿಗಳನ್ನು ಬರೆದು, ಅವುಗಳನ್ನು ಶಾಖಾಧಿಕಾರಿಗೆ ಸಲ್ಲಿಸುತ್ತಾರೆ. ಅವರು ಆದೇಶಗಳ ಪ್ರಕಾರ ಕಡತದಲ್ಲಿ ಕರಡುಗಳನ್ನು ಸಹ ಸಿದ್ದಪಡಿಸಿ ಒಪ್ಪಿಸುತ್ತಾರೆ. ಹಿರಿಯ ಸಹಾಯಕ ಮೋಟಾರು ವಾಹನ ಶಾಖೆ ಮತ್ತು ಹಿರಿಯ ಸಹಾಯಕ ರಾಜ್ಯ ಸಾರಿಗೆ ನಿಗಮದ ಶಾಖೆ ಇವರುಗಳು ಮಾಹಿತಿ ಹಕ್ಕು ಅಧಿನಿಯಮ 2005ರ ಅನ್ವಯ ರಾಜ್ಯ ಸಹಾಯಕ ಮಾಹಿತಿ ಅಧಿಕಾರಿಯಾಗಿಯೂ ಕರ್ತವ್ಯ ನಿರ್ವಹಿಸುತ್ತಾರೆ.

ಐ) ಕಿರಿಯ ಸಹಾಯಕ : ಪ್ರತಿಯೊಂದು ಶಾಖೆಗೂ ಅಂದರೆ ಮೋಟಾರು ವಾಹನ ಶಾಖೆಗೆ ಮತ್ತು ರಾಜ್ಯ ಸಾರಿಗೆ ಉದ್ಯಮಗಳ ಶಾಖೆಗೆ ಒಬ್ಬ ಕಿರಿಯ ಸಹಾಯಕರಿರುತ್ತಾರೆ. ಉಪಕಾರ್ಯದರ್ಶಿ, ಕಾರ್ಯದರ್ಶಿ, ಇವರಿಗೂ ಸಹ ಕಿರಿಯ ಸಹಾಯಕರು ಇರುತ್ತಾರೆ. ಅವರು ಪ್ರತಿ ದಿನವು ಶಾಖೆಗೆ ಬರುವ ಟಪಾಲುಗಳನ್ನು ಮತ್ತು ಕಡತಗಳನ್ನು ಸ್ವೀಕರಿಸಿ ಅವುಗಳನ್ನು ವಿಷಯ ನಿರ್ವಾಹಕರಿಗೆ ವಿತರಣೆ ಮಾಡುತ್ತಾರೆ, ಕಡತಗಳ ಚಲನವಲನವನ್ನು ನಿರ್ವಹಿಸುತ್ತಾರೆ. ಪತ್ರ ಮೊದಲಾದವುಗಳನ್ನು ಹೊರಡಿಸುವುದಕ್ಕಾಗಿ ಜವಾಬ್ದಾರರಾಗಿರುತ್ತಾರೆ. ಅವರು ಕರ್ನಾಟಕ ಸಚಿವಾಲಯ ಕೈಪಿಡಿ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಜೆ) ಶೀಘ್ರಲಿಪಿಗಾರರು: ಅಧೀನ ಕಾರ್ಯದರ್ಶಿ, ಉಪಕಾರ್ಯದರ್ಶಿ ಮತ್ತು ಕಾರ್ಯದರ್ಶಿಯವರಿಗೆ ಶೀಘ್ರಲಿಪಿಗಾರರು ಇರುತ್ತಾರೆ. ಅವರು ಅಧಿಕಾರಿಗಳು ನೀಡಿರುವ ಉಕ್ತಲೇಖನವನ್ನು ಬೆರಳಚ್ಚು ಮಾಡುತ್ತಾರೆ ಮತ್ತು ಅಧಿಕಾರಿಗಳ ನಿರ್ದೇಶನಗಳ ಪ್ರಕಾರ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಕಾರ್ಯದರ್ಶಿಗಳಿಗೆ ಸಂಬಂಧಪಟ್ಟ ಶೀಘ್ರಲಿಪಿಗಾರರು/ಆಪ್ತ ಸಿಬ್ಬಂದಿ ವರ್ಗದವರು ಸಾರಿಗೆ ಇಲಾಖೆಯ ಪ್ರಥಮ ಶ್ರೇಣಿಯ ಅಧಿಕಾರಿಗಳ ಎಪಿಆರ್‌ಗಳಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳನ್ನು ಸಹ ನಿರ್ವಹಿಸುತ್ತಾರೆ. ಅವರು ಕರ್ನಾಟಕ ಸಚಿವಾಲಯ ಕೈಪಿಡಿಯ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಕೆ) ಬೆರಳಚ್ಚುಗಾರರು: ಶಾಖೆಗಳಿಗೆ ಸಂಬಂಧಪಟ್ಟಂತೆ ಬೆರಳಚ್ಚುಗಾರರು ಇರುತ್ತಾರೆ. ಅವರು ಶಾಖೆಯಲ್ಲಿನ ಬೆರಳಚ್ಚು ಕಾರ್ಯವನ್ನು ನಿರ್ವಹಿಸುತ್ತಾರೆ.

ಎಲ್) ದಲಾಯಿತರು (ಶ್ರೇಣಿ–4): ದಲಾಯಿತರು ಕಛೇರಿಯನ್ನು ಅಚ್ಚುಕಟ್ಟಾಗಿ ಮತ್ತು ಚೊಕ್ಕಟವಾಗಿಡುತ್ತಾರೆ. ಕರ್ನಾಟಕ ಸಚಿವಾಲಯ ಕೈಪಿಡಿಯಲ್ಲಿರುವ ಸೂಚನೆಗಳ ಪ್ರಕಾರ ಅವರು ಇತರ ಶಾಖೆಗಳಿಗೆ / ಇಲಾಖೆಗಳಿಗೆ ಕಡತಗಳನ್ನು / ಟಪಾಲುಗಳನ್ನು ತಲುಪಿಸುತ್ತಾರೆ. ಮುಕ್ತಾಯ ಮಾಡಲಾದ ಕಡತಗಳನ್ನು ಒಟ್ಟಿಗೆ ಸೇರಿಸಿ ಹೊಲಿದು, ಅವುಗಳನ್ನು ಸಾಮಾನ್ಯ ದಾಖಲೆ ಶಾಖೆಗೆ ತಲುಪಿಸುತ್ತಾರೆ.

(iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಹಂತಗಳೂ ಸೇರಿದಂತೆ ತೀರ್ಮಾನವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:

ಎ) ತೀರ್ಮಾನವನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಲಾಗುವಂತಹ ಕಾರ್ಯವಿಧಾನವು ಹೀಗಿದೆ.

ವಿಷಯ ನಿರ್ವಾಹಕ: ಇವರು ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ಹೊಸ ಕಡತವನ್ನು ತೆರೆಯುತ್ತಾರೆ ಅಥವಾ ಈಗಾಗಲೇ ಇರುವ ಕಡತದಲ್ಲಿನ ಪತ್ರಗಳ ಮಾಹಿತಿಯನ್ನು ಪರಿಶೀಲಿಸುತ್ತಾರೆ.

ಶಾಖಾಧಿಕಾರಿ: ಇವರು ಪ್ರಸ್ತಾವನೆಗೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಪರಿಶೀಲಿಸುತ್ತಾರೆ ಮತ್ತು ಕೈಗೊಳ್ಳಬೇಕಾದ ಮುಂದಿನ ಕ್ರಮಕ್ಕಾಗಿ ಕಡತವನ್ನು ಅಧೀನ ಕಾರ್ಯದರ್ಶಿಗಳಿಗೆ ಗುರುತು ಮಾಡಿ ಕಳುಹಿಸುತ್ತಾರೆ.

ಅಧೀನ ಕಾರ್ಯದರ್ಶಿ: ಇವರು ಪ್ರಸ್ತಾವನೆ ಕುರಿತು ಸೂಕ್ತ ಕ್ರಮವನ್ನು ಸೂಚಿಸುತ್ತಾರೆ ಮತ್ತು ಇರುವಂತಹ ನಿಯಮಗಳು ಅಥವಾ ಅಧಿನಿಯಮಗಳ ಉಪಬಂಧಗಳು, ಪೂರ್ವ ನಿದರ್ಶನ ಪ್ರಕರಣಗಳ ಹಿನ್ನೆಲೆಯಲ್ಲಿ ಅದರ ಅರ್ಥವನ್ನು ವಿವರಿಸುತ್ತಾರೆ ಅಥವಾ ನಿಯೋಜಿತವಾದ ಅಧಿಕಾರಿಗಳ ಮೇರೆಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

ಉಪಕಾರ್ಯದರ್ಶಿ: ಇವರು ಪ್ರಕರಣವನ್ನು ಸಮಗ್ರ ದೃಷ್ಟಿಯಲ್ಲಿ ಪರಿಶೀಲಿಸಿ, ಪರಿಶೀಲನೆಯಲ್ಲಿರುವಂತಹ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಅಳವಡಿಸಿಕೊಳ್ಳಬೇಕಾದ ಅಂತಿಮ ಕ್ರಮದ ಅನುಮೋದನೆಗಾಗಿ ಪ್ರಧಾನ ಕಾರ್ಯದರ್ಶಿಗಳಿಗೆ ಕಡತವನ್ನು ಸಲ್ಲಿಸುತ್ತಾರೆ ಅಥವಾ ನಿಯೋಜಿತವಾದ ಅಧಿಕಾರಗಳ ಮೇರೆಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

ಪ್ರಧಾನ ಕಾರ್ಯದರ್ಶಿ: ಇವರು ನಿಯೋಜಿತ ಅಧಿಕಾರಿಗಳ ಮೇರೆಗೆ ಪ್ರಸ್ತಾವನೆ ಕುರಿತಂತೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ ಮತ್ತು ಅಗತ್ಯವಾದರೆ, ಸಂದರ್ಭಾನುಸಾರ, ಸಾರಿಗೆ ಇಲಾಖೆಯ ಮಾನ್ಯ ಸಚಿವರಿಗೆ ಅಥವಾ ಸರ್ಕಾರಕ್ಕೆ ಅಂತಿಮ ಆದೇಶಗಳಿಗಾಗಿ ಕಡತವನ್ನು ಸಲ್ಲಿಸಿರುತ್ತಾರೆ.

(ಬಿ) ಮೇಲ್ವಿಚಾರಣೆಯ ಹಂತಗಳು:–

ಮೋಟಾರು ವಾಹನಗಳ ಶಾಖೆ: ವಿಷಯ ನಿರ್ವಾಹಕ→ ಪೀಠಾಧಿಕಾರಿ → ಅಧೀನ ಕಾರ್ಯದರ್ಶಿ → ಉಪಕಾರ್ಯದರ್ಶಿ → ಪ್ರಧಾನ ಕಾರ್ಯದರ್ಶಿ

ರಾಜ್ಯ ಸಾರಿಗೆ ನಿಗಮ ಶಾಖೆ:

ವಿಷಯ ನಿರ್ವಾಹಕ→ಶಾಖಾಧಿಕಾರಿ→ ಅಧೀನ ಕಾರ್ಯದರ್ಶಿ →ಉಪಕಾರ್ಯದರ್ಶಿ→ಪ್ರಧಾನ ಕಾರ್ಯದರ್ಶಿ

ಸ್ವೀಕೃತಿ ರವಾನೆ ಮತ್ತು ಸಮನ್ವಯ ಶಾಖೆ

ವಿಷಯ ನಿರ್ವಾಹಕ→ಶಾಖಾಧಿಕಾರಿ→ಅಧೀನ ಕಾರ್ಯದರ್ಶಿ→ ಉಪಕಾರ್ಯದರ್ಶಿ→ ಪ್ರಧಾನ ಕಾರ್ಯದರ್ಶಿ

ಆಂತರಿಕ ಹಣಕಾಸು ಸಲಹೆಗಾರರು (ಅಭಿಪ್ರಾಯ) :

ವಿಷಯ ನಿರ್ವಾಹಕ → ಶಾಖಾಧಿಕಾರಿ → ಆಂತರಿಕ ಹಣಕಾಸು ಸಲಹೆಗಾರರು → ಪ್ರಧಾನ ಕಾರ್ಯದರ್ಶಿ

ಆಂತರಿಕ ಹಣಕಾಸು ಸಲಹೆಗಾರರು (ಬಜೆಟ್) :

ವಿಷಯ ನಿರ್ವಾಹಕ → ಶಾಖಾಧಿಕಾರಿ → ಆಂತರಿಕ ಹಣಕಾಸು ಸಲಹೆಗಾರರು → ಪ್ರಧಾನ ಕಾರ್ಯದರ್ಶಿ

ಕಾನೂನು ಕೋಶ:

ವಿಷಯ ನಿರ್ವಾಹಕ →ಅಧೀನ ಕಾರ್ಯದರ್ಶಿ →ಕಾನೂನು ಕೋಶದ ಮುಖ್ಯಸ್ಥರು → ಪ್ರಧಾನ ಕಾರ್ಯದರ್ಶಿ

(iv) ಪ್ರಕಾರ್ಯಗಳ ನಿರ್ವಹಣೆಗಾಗಿ ನಿರೂಪಿಸಲಾದ ಮಾದರಿಗಳು:

ದಲಾಯಿತ: ಆತನು ತನಗೆ ವಹಿಸಿಕೊಡಲಾದ ಕೆಲಸಗಳನ್ನು ಆ ದಿನದಂದೇ ನಿರ್ವಹಿಸಬೇಕು.

ಕಿರಿಯ ಸಹಾಯಕ: ಆತನು ತನಗೆ ವಹಿಸಿಕೊಡಲಾದ ಕೆಲಸಗಳನ್ನು ಆ ದಿನದಂದೇ ನಿರ್ವಹಿಸಬೇಕು.

ವಿಷಯ ನಿರ್ವಾಹಕರು: (ಕರ್ನಾಟಕ ಸಚಿವಾಲಯ ಕೈಪಿಡಿ ಪ್ರಕಾರ) ಕಡತಗಳನ್ನು/ಟಪಾಲುಗಳನ್ನು 5 ದಿನಗಳವರೆಗೂ ಸಲ್ಲಿಸಬೇಕು.

ಶಾಖಾಧಿಕಾರಿ
ಅಧೀನ ಕಾರ್ಯದರ್ಶಿ
ಉಪಕಾರ್ಯದರ್ಶಿ
ಪ್ರಧಾನ ಕಾರ್ಯದರ್ಶಿ
} **ಆದ್ಯತೆಯ ಮೇಲೆ ಕೆಲಸವನ್ನು ನಿರ್ವಹಿಸಬೇಕು**

(v) ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ, ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ನೌಕರರು ಬಳಸುವ ನಿಯಮಗಳು, ವಿನಿಯಮಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು:

1. ಕೇಂದ್ರ ಮೋಟಾರು ವಾಹನಗಳ ಅಧಿನಿಯಮ, 1988.
2. ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989.
3. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957.
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ನಿಯಮಗಳು, 1957.
5. ರಸ್ತೆ ಸಾರಿಗೆ ನಿಗಮ ಅಧಿನಿಯಮ, 1950.
6. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಗಳು, 1961.
7. ಕರ್ನಾಟಕ ಸಿವಿಲ್ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1974.
8. ಇಲಾಖಾ ಬಡ್ತಿ ಸಮಿತಿಗಳು.
9. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977.
10. ಕರ್ನಾಟಕ ಸಿವಿಲ್ ಸೇವಾ (ಪ್ರೊಬೇಷನ್) ನಿಯಮಗಳು, 1977.
11. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಮೀಸಲಾತಿ ರೋಸ್ಟರ್.
12. ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 1994.
13. ಕರ್ನಾಟಕ ಲೋಕಸೇವಾ ಆಯೋಗ (ಸಮಾಲೋಚನೆ) ವಿನಿಯಮ, 2000.
14. ಸೇವೆಯಲ್ಲಿರುವಾಗ ಮೃತರಾದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪ ಆಧಾರದಲ್ಲಿ ನೇಮಕಾತಿ.
15. ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957.
16. ಕರ್ನಾಟಕ ಸಿವಿಲ್ ಸೇವಾ (ನಡವಳಿಕೆ) ನಿಯಮಗಳು, 1966.
17. ಕರ್ನಾಟಕ ಸರ್ಕಾರಿ (ವ್ಯವಹಾರ ಹಂಚಿಕೆ) ನಿಯಮಗಳು, 1977.
18. ಕರ್ನಾಟಕ ಕಾರ್ಯನಿರ್ವಹಣಾ ನಿಯಮಗಳು, 1977.
19. ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1963.
20. ಕರ್ನಾಟಕ ಸಿವಿಲ್ ಸೇವಾ ನಿಯಮಗಳು.

(vi) ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಾಖಲೆಗಳ ಪ್ರವರ್ಗ:–

ಸಾರಿಗೆ ಇಲಾಖೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ದೇವರಾಜ ಅರಸ್ ಟ್ರಕ್ ಟರ್ಮಿನಲ್ ಲಿ., – ಇವುಗಳಿಗೆ ಸಂಬಂಧಪಡುವ ಎಲ್ಲಾ ಕಡತಗಳನ್ನು ಸಾರಿಗೆ ಸಚಿವಾಲಯವು ನಿರ್ವಹಿಸುತ್ತದೆ ಮತ್ತು ಪರಿಷ್ಕರಿಸುತ್ತದೆ.

(vii) ರಚನಾ ನೀತಿ ಅಥವಾ ಅದರ ಅನುಷ್ಠಾನದ ಸಂಬಂಧದಲ್ಲಿ ಸಾರ್ವಜನಿಕರೊಡನೆ ಸಮಾಲೋಚನೆ ನಡೆಸುವುದಕ್ಕಾಗಿ ಅಥವಾ ಅವರ ಪ್ರಾತಿನಿಧ್ಯಕ್ಕಾಗಿ ಮಾಡಲಾದ ಏರ್ಪಾಡುಗಳ ವಿವರಗಳು:

ತೆಗೆದುಕೊಂಡ ಕಾರ್ಯನೀತಿ ನಿರ್ಧಾರಗಳು ಹಾಗೂ ಮಾಡಿರುವ ಅನುಷ್ಠಾನವು ಮೋಟಾರು ವಾಹನಗಳ ಅಧಿನಿಯಮ ಮತ್ತು ನಿಯಮಗಳಲ್ಲಿ ಒಳಗೊಂಡಿರುತ್ತದೆ. ಅಂಥ ಸಮಾಲೋಚನೆಗಾಗಿ ಅಧಿನಿಯಮ ಮತ್ತು ನಿಯಮಗಳಲ್ಲಿ ಉಪಬಂಧವನ್ನು ಕಲ್ಪಿಸಿದರೆ, ತದನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.

(viii) ಸಲಹೆಯ ಉದ್ದೇಶಕ್ಕಾಗಿ ಮಂಡಳಿಗಳ, ಪರಿಷತ್ತುಗಳ, ಸಮಿತಿ ಇತ್ಯಾದಿಗಳ ವಿವರಣೆ: ಸಾರಿಗೆ ಸಚಿವಾಲಯದಲ್ಲಿ ಅಂಥ ಯಾವುದೇ ಮಂಡಳಿಗಳು ಪರಿಷತ್ತುಗಳು ಅಥವಾ ಸಮಿತಿಗಳು ಇಲ್ಲ.

(ix) ಅಧಿಕಾರಿಗಳು ಮತ್ತು ನೌಕರರ ನಿರ್ದೇಶಿಕೆ:–

ಕ್ರ ಸಂ.	ಪದನಾಮ	ಅಧಿಕಾರಿ/ನೌಕರರ ಹೆಸರು (ಶ್ರೀಯುತರು)	ದೂರವಾಣಿ ಸಂಖ್ಯೆ ಕಛೇರಿ/ಮನೆ	ಮೊಬೈಲ್ ನಂ	ಇ–ಮೇಲ್ ವಿಳಾಸ
1	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	ಪಿ. ರವಿಕುಮಾರ್	080-22353912 (R)080-26486429	9448124242	secretarytransport@gmail.com
2	ಶಾಖಾಧಿಕಾರಿ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	ಶಾಂತಕುಮಾರ್ ಕೆ.ಎಂ	080-22353912	9448684025	shanthakumarkgs@gmail.com
3	ಹಿರಿಯ ಶೀಘ್ರಲಿಪಿಗಾರರು ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	ಛಾಯಾ.ಹೆಚ್.ಟಿ	080-22353912	9036651962	hemashree_85yahoo.co.in
4	ಶೀಘ್ರಲಿಪಿಗಾರ್ತಿ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	ಮಹಾಜಬೀನ್ ಸೈ. ಮುಲ್ಲಾ	080-22353912	9740250746	meharkgs@gmail.com
5	ದಲಾಯಿತ್ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ (ಖಾಲಿ)	ಖಾಲಿ	080-22353912	9986362175	
6	ಜಮೇದಾರ್ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	ಉಮಾಪತಿ	080-22353912	9980097211	
7	ಸರ್ಕಾರದ ಉಪಕಾರ್ಯದರ್ಶಿ	ಎನ್.ಶ್ರೀನಿವಾಸ ಮೂರ್ತಿ	080-22353962 (R)080-23481021	9972109572	
8	ಶೀಘ್ರಲಿಪಿಗಾರರು ಉಪ ಕಾರ್ಯದರ್ಶಿಯವರ ಆಪ್ತ ಶಾಖೆ (ಖಾಲಿ)	ಖಾಲಿ			
9	ಕಿರಿಯ ಸಹಾಯಕ (ಖಾಲಿ)	ಖಾಲಿ			
10	ಜಮೇದಾರ್ / ದಲಾಯತ್ (ಖಾಲಿ)	ಖಾಲಿ			

11	ಸರ್ಕಾರದ ಅಧೀನ ಕಾರ್ಯದರ್ಶಿ	ಕೆ.ಬೀರೇಶ್	080-22032292 **(R)** 7760992043	9845058774	undersecretarytransport@gmail.com
12	ಶೀಘ್ರಲಿಪಿಗಾರರು ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	ಸಿ.ಸುಚರಿತಾ	080-22032292	9945246257	
13	ಜಮೇದಾರ್ ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	ಶೋಭಾ ಎಸ್.ವಿ	080-22032292 **(R)**080-26657108	9008317905	
14	ಶಾಖಾಧಿಕಾರಿ ಸಾರಿಗೆ-1 ಶಾಖೆ	ಕೆ.ನಾಗರಾಜು	080-22032914	9945434613	
15	ಎಸ್.ಸುನೀತಾ ಹಿರಿಯ ಸಹಾಯಕಿ ಸಾರಿಗೆ-1 ಶಾಖೆ	080-22032014	7760660609	080-22032014	
16	ಸಹಾಯಕ	ಶಿವಕೇಶವ . ಪಿ	080-22032914	9845233307	
17	ಸಹಾಯಕ ಸಾರಿಗೆ-1 ಶಾಖೆ (ಖಾಲಿ)	ಖಾಲಿ	080-22032914		
18	ಕಿರಿಯ ಸಹಾಯಕಿ ಸಾರಿಗೆ-1 ಶಾಖೆ	ಮೇರಿ ಸುಪ್ರಿಯ	080-22032914	9591805354	
19	ಬೆರಳಚ್ಚುಗಾರ್ತಿ ಸಾರಿಗೆ-1 ಶಾಖೆ	ಆರ್.ದೀಪಾ	080-22032914	8197355643	
20	ದಲಾಯತ್ (ಖಾಲಿ) ಸಾರಿಗೆ-1 ಶಾಖೆ	ಖಾಲಿ			
21	ಪೀಠಾಧಿಕಾರಿ ಸಾರಿಗೆ-2 ಶಾಖೆ	ಆರ್. ಪ್ರಭುಶಂಕರ್	080-22032014	9945800428	
22	ಹಿರಿಯ ಸಹಾಯಕ ಸಾರಿಗೆ-2 ಶಾಖೆ	ನಾರಾಯಣಸ್ವಾಮಿ	080-22032014	9611141598	
23	ಸಹಾಯಕ ಸಾರಿಗೆ-2 ಶಾಖೆ	ಖಾಲಿ	080-22032014	9945017003	
24	ಸಹಾಯಕ ಸಾರಿಗೆ-2 ಶಾಖೆ	ಜಿ.ಆರ್.ಹೇಮಂತ್	080-22032014		
25	ಬೆರಳಚ್ಚುಗಾರರು ಸಾರಿಗೆ-2 ಶಾಖೆ	ಶ್ವೇತಾ	080-22032014	9980697149	
26	ದಲಾಯತ್/ ಗ್ರೂಪ್ ಡಿ (ಖಾಲಿ) ಸಾರಿಗೆ-2 ಶಾಖೆ				
27	ಶಾಖಾಧಿಕಾರಿ ಸಮನ್ವಯ ಶಾಖೆ	ವಿ.ಎಸ್.ಉಮಾದೇವಿ	080-22032336	9449963252	
28	ಸಹಾಯಕಿ ಸಮನ್ವಯ ಶಾಖೆ	ಆರ್. ಸರಸ್ವತಮ್ಮ	080-22032336		
29	ಕಿರಿಯ ಸಹಾಯಕ ಸಮನ್ವಯ ಶಾಖೆ (ಖಾಲಿ)	ಖಾಲಿ			

30	ಕಿರಿಯ ಸಹಾಯಕ ಸಮನ್ವಯ ಶಾಖೆ (ಖಾಲಿ)	ಖಾಲಿ			
31	ಜಮೇದಾರ್ / ದಲಾಯತ್ ಸಮನ್ವಯ ಶಾಖೆ (ಖಾಲಿ)	ಖಾಲಿ			
32	ಜಮೇದಾರ್ / ದಲಾಯತ್ (ಖಾಲಿ)	ಖಾಲಿ			
33	ಬೆರಳಚ್ಚುಗಾರ್ತಿ	ಪ್ರೇಮಕುಮಾರಿ	080-22032292	9743384650	

(x) ನಷ್ಟ ಪರಿಹಾರ ವ್ಯವಸ್ಥೆಯನ್ನು ಒಳಗೊಂಡಂತೆ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುತ್ತಿರುವ ಮಾಸಿಕ

ಕ್ರ. ಸಂ.	ಪದನಾಮ	ಒಟ್ಟು ವೇತನ ರೂ.ಗಳಲ್ಲಿ
1	ಪಿ.ರವಿಕುಮಾರ್ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಸಾರಿಗೆ ಇಲಾಖೆ	1,95,200/–
2	ಶಾಂತಕುಮಾರ್ ಕೆ.ಎಂ, ಶಾಖಾಧಿಕಾರಿ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	51,135/–
3	ಛಾಯಾ.ಹೆಚ್.ಟಿ ಹಿರಿಯ ಶೀಘ್ರಲಿಪಿಗಾರರು ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	32,580/–/–
4	ಮಹಾಜಬೀನ್ ಸೈ. ಮುಲ್ಲಾ, ಶೀಘ್ರಲಿಪಿಗಾರ್ತಿ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	33,324/–
5	ದಲಾಯತ್ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	ಖಾಲಿ
6	ಉಮಾಪತಿ ಜಮೇದಾರ್ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ	28,300/–
7	ಎನ್.ಶ್ರೀನಿವಾಸಮೂರ್ತಿ ಸರ್ಕಾರದ ಉಪಕಾರ್ಯದರ್ಶಿ, ಸಾರಿಗೆ ಇಲಾಖೆ	83,505/–
8	ಶೀಘ್ರಲಿಪಿಗಾರರು ಉಪ ಕಾರ್ಯದರ್ಶಿಯವರ ಆಪ್ತ ಶಾಖೆ (ಖಾಲಿ)	ಖಾಲಿ
9	ಕಿರಿಯ ಸಹಾಯಕ (ಖಾಲಿ) ಉಪ ಕಾರ್ಯದರ್ಶಿಯವರ ಆಪ್ತ ಶಾಖೆ (ಖಾಲಿ)	ಖಾಲಿ
10	ಜಮೇದಾರ್ / ದಲಾಯತ್ (ಖಾಲಿ)	
11	ಕೆ.ಬೀರೇಶ್, ಸರ್ಕಾರದ ಅಧೀನ ಕಾರ್ಯದರ್ಶಿ, ಸಾರಿಗೆ ಇಲಾಖೆ	49,930/–
12	ಸಿ.ಸುಚರಿತಾ, ಶೀಘ್ರಲಿಪಿಗಾರರು ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	27,920/–

13	ಶೋಭಾ ಎಸ್.ವಿ, ಜಮೇದಾರ್ ಅಧೀನ ಕಾರ್ಯದರ್ಶಿಯವರ ಆಪ್ತ ಶಾಖೆ	26,150/–
14	ಕೆ.ನಾಗರಾಜ್ ಶಾಖಾಧಿಕಾರಿ ಸಾರಿಗೆ–1 ಶಾಖೆ	40,639/–
15	ಎಸ್.ಸುನೀತಾ, ಹಿರಿಯ ಸಹಾಯಕಿ ಸಾರಿಗೆ–1 ಶಾಖೆ	32,994/–
16	ಸಹಾಯಕ–1	ಖಾಲಿ
17	ಶಿವಕೇಶವ.ಪಿ ಸಹಾಯಕ ಸಾರಿಗೆ–1 ಶಾಖೆ	27,755/–
18	ಮೇರಿ ಸುಪ್ರಿಯ ಕಿರಿಯ ಸಹಾಯಕಿ	19,500/–
19	ಆರ್.ದೀಪಾ, ಬೆರಳಚ್ಚುಗಾರ್ತಿ ಸಾರಿಗೆ–1	19,318/–
20	ದಲಾಯತ್ / ಗ್ರೂಪ್ ಡಿ (ಖಾಲಿ)	ಖಾಲಿ
21	ಆರ್.ಪ್ರಭುಶಂಕರ್ ಪೀಠಾಧಿಕಾರಿ ಸಾರಿಗೆ–2 ಶಾಖೆ	52,000/–
22	ಶ್ರೀ ಎಸ್.ನಾರಾಯಣಸ್ವಾಮಿ ಹಿರಿಯ ಸಹಾಯಕರು, ಸಾರಿಗೆ–2 ಶಾಖೆ,	32,500/–
23	ಜಿ.ಆರ್.ಹೇಮಂತ್ ಸಹಾಯಕ ಸಾರಿಗೆ–2 ಶಾಖೆ	26,000/–
24	ಸಹಾಯಕ, ಸಾರಿಗೆ–2 ಶಾಖೆ	
25	ಶ್ವೇತಾ ಬೆರಳಚ್ಚುಗಾರರು, ಸಾರಿಗೆ–2 ಶಾಖೆ	18,905/–
26	ದಲಾಯತ್/ ಗ್ರೂಪ್ ಡಿ (ಖಾಲಿ)	ಖಾಲಿ
27	ವಿ.ಎಸ್.ಉಮಾದೇವಿ ಶಾಖಾಧಿಕಾರಿ ಸ್ವೀಮರ ಶಾಖೆ	47,490/–
28	ಆರ್. ಸರಸ್ವತಿ, ಸಹಾಯಕಿ. ಸಮನ್ವಯ ಶಾಖೆ	27,000/–
29	ಕಿರಿಯ ಸಹಾಯಕ	ಖಾಲಿ
30	ಕಿರಿಯ ಸಹಾಯಕ	ಖಾಲಿ
31	ಜಮೇದಾರ್ / ದಲಾಯತ್	ಖಾಲಿ
32	ಜಮೇದಾರ್ / ದಲಾಯತ್	ಖಾಲಿ
33	ಪ್ರೇಮಕುಮಾರಿ ಬೆರಳಚ್ಚುಗಾರ್ತಿ	46,305/–

ಟಿಪ್ಪಣಿ:– ಆಂತರಿಕ ಹಣಕಾಸು ಸಲಹೆಗಾರರು (ಐಎಫ್ಎ) ಶಾಖೆ ಮತ್ತು ಕಾನೂನು ಮುಖ್ಯ ಶಾಖೆಯ ಸಂಬಂಧದಲ್ಲಿನ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆಯನ್ನು ಗೃಹ ಇಲಾಖೆಯಿಂದ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

(xi) ಎಲ್ಲ ಯೋಜನೆಗಳು, ಉದ್ದೇಶಿತ ವೆಚ್ಚ ಮತ್ತು ಬಟವಾಡೆ ಮಾಡಿದ್ದರ ಬಗೆಗಿನ ವರದಿಗಳ ವಿವರಗಳೊಂದಿಗೆ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಬಜೆಟ್ :

ಸಾರಿಗೆ ಇಲಾಖೆ				
ಯೋಜನೆಯ ಹೆಸರು	ಲೆಕ್ಕ ಶೀರ್ಷಿಕೆ	ಯೋಜನೆ/ ಯೋಜನೇತರ	ನಿಗದಿತ ಅನುದಾನ	ಬಿಡುಗಡೆ ಗೊಳಿಸಲಾದ ಮೊತ್ತ
ಇತರೆ ಸಾರಿಗೆ ಸೇವೆಗಳು – ಮಾಲಿನ್ಯ ನಿಯಂತ್ರಣ	2041–00–101–0–01	ಯೋಜನೆ	100.00	100.00
ಚಾಲಕ ತರಬೇತಿ ಸಂಸ್ಥೆ ಸ್ಥಾಪನೆ	5055–00–050–0–04	ಯೋಜನೆ	1100.00	1101.00
	2041–00–800–0–02	ಯೋಜನೆ	443.01	443.01
ಪ್ರಾದೇಶಿಕ ಸಾರಿಗೆ ಕಛೇರಿ ಕಟ್ಟಡ ಮತ್ತು ಚಾಲನಾ ಪಥ ನಿರ್ಮಾಣ	4059–80–051–0–34	ಯೋಜನೆ	600.00	600.00
			6651.71	**6651.71**

2014–15ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರ					
ಕರಾರಸಾಸಂಸ್ಥೆ					
ಯೋಜನೆ			ಯೋಜನೇತರ		
ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)	ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)
5055–00–190–1–00	1138.50	1138.50	3055–00–190–0–06–07–08–09–10–11	18920.33	18920.33
ವಾಕರಾರಸಾಸಂಸ್ಥೆ					
ಯೋಜನೆ			ಯೋಜನೇತರ		
ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)	ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)
5055–00–190–1–00	1138.50	1138.50	3055–00–190–0–04–09–02–07–06–11–08	3938.07	3938.07
ಈಕರಾರಸಾಸಂಸ್ಥೆ					
ಯೋಜನೆ			ಯೋಜನೇತರ		
ವಿಶೇಷ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)	ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)
5055–00–190–2–00	1138.50	1138.50	3055–00–190–0–05–09–02–07–06–11–08	5615.35	5615.35

ಬೆಂಮನಸಾಸಂಸ್ಥೆ		
ಯೋಜನೇತರ		
ವಿವಿಧ ರೀತಿಯ ಬಸ್ ಪಾಸುಗಳು ಲೆಕ್ಕ ಶೀರ್ಷಿಕೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)
3055–00–190–0–03–09–08–07–06–11	14008.47	14008.47
ಡಿಡಿಯುಟಿಟಿಎಲ್		
ಯೋಜನೆ		
ಟ್ರಕ್ ಟರ್ಮಿನಲ್‌ಗಳ ನಿರ್ಮಾಣಕ್ಕಾಗಿ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)
5055–00–050–0–02–386	1800.00	1.00
ನರ್ಮ್ (ಸಾರಿಗೆ ಸಂಸ್ಥೆಗಳಿಗೆ)		
ನಗರ ಸಾರಿಗೆಯ ಮೂಲಭೂತ ಸೌಕರ್ಯಗಳಿಗೆ	ಹಂಚಿಕೆ (ರೂ.ಲಕ್ಷಗಳಲ್ಲಿ)	ಬಿಡುಗಡೆ (ರೂ.ಲಕ್ಷಗಳಲ್ಲಿ)
5055–00–800–0–01	660.00	0.00

(xii) ಹಂಚಿಕೆ ಮಾಡಿದ ಮೊತ್ತದೊಂದಿಗೆ ಸಹಾಯಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು:

ಸಾರಿಗೆ ಸಚಿವಾಲಯವು ಯಾವುದೇ ಸಹಾಯಕ ಕಾರ್ಯಕ್ರಮವನ್ನು ನೇರವಾಗಿ ನಿರ್ವಹಿಸುವುದಿಲ್ಲ. ಆದರೆ ಇದು ಸಹಾಯಕ ಕಾರ್ಯಕ್ರಮಗಳಿಗೆ ನಿಧಿಗಳನ್ನು ಮಂಜೂರು ಮಾಡುತ್ತದೆ.

(xiii) ರಿಯಾಯಿತಿಗಳು, ಪರ್ಮಿಟ್ಟುಗಳು ಅಥವಾ ಅಧಿಕಾರ ಪತ್ರ ಪಡೆದುಕೊಂಡವರ ವಿವರಗಳು:

ಸಾರಿಗೆ ಸಚಿವಾಲಯವು ಬಾಬ್ತು ಸಂ. **(xii)** ರಲ್ಲಿ ವಿವರಿಸಲಾದಂತಹ ನಿಧಿಗಳನ್ನು ಮಂಜೂರು ಮಾಡುತ್ತದೆ. ಮೋಟಾರು ವಾಹನಗಳ ಅಧಿನಿಯಮದ ಪ್ರಕಾರ ಮೋಟಾರು ವಾಹನಗಳಿಗೆ ಪರ್ಮಿಟ್ಟುಗಳನ್ನು ಸಾರಿಗೆ ಇಲಾಖೆ (ಕ್ಷೇತ್ರ ಇಲಾಖೆ) ಯಿಂದ ಮಂಜೂರು ಮಾಡಲಾಗುತ್ತದೆ.

(xiv) ವಿದ್ಯುನ್ಮಾನ ರೂಪದಲ್ಲಿ ಹೊಂದಿರುವ ಮಾಹಿತಿಯ ಸಂಬಂಧದಲ್ಲಿನ ವಿವರಗಳು:

ಇಲ್ಲ.

(xv) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದರೆ ಅವುಗಳು ಸೇರಿದಂತೆ ಇತರ ಮಾಹಿತಿಯನ್ನು ಪಡೆದುಕೊಳ್ಳುವುದಕ್ಕಾಗಿ ನಾಗರೀಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು: ಸಾರಿಗೆ ಸಚಿವಾಲಯವು ಯಾವುದೇ ಅಂತಹ ಗ್ರಂಥಾಲಯವನ್ನು ನಿರ್ವಹಿಸುತ್ತಿಲ್ಲ.

(xvi) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೆ ವಿವರಗಳು:

1) ಮೊದಲನೆ ಮೇಲ್ಮನವಿ ಪ್ರಾಧಿಕಾರ:–

ಶ್ರೀ ಕೆ. ಬೀರೇಶ್
ಸರ್ಕಾರದ ಅಧೀನ ಕಾರ್ಯದರ್ಶಿ, ಸಾರಿಗೆ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ, 1ನೇ ಮಹಡಿ, ಕೊಠಡಿ ಸಂಖ್ಯೆ: 125
ಬಹುಮಹಡಿ ಕಟ್ಟಡ, ಬೆಂಗಳೂರು–560 001, ದೂರವಾಣಿ ನಂ. 080–22032292.

2) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೆ ವಿವರಗಳು:

(1) ಶ್ರೀ ಪ್ರಭುಶಂಕರ್
ಪೀಠಾಧಿಕಾರಿ, ಸಾರಿಗೆ ಶಾಖೆ–2
ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, 1ನೇ ಮಹಡಿ, ಕೊಠಡಿ ಸಂಖ್ಯೆ: 122,
ಬಹುಮಹಡಿ ಕಟ್ಟಡ, ಬೆಂಗಳೂರು – 560 001, ದೂರವಾಣಿ ಸಂ: 080–22032014.

(2) ಶ್ರೀ ಕೆ.ನಾಗರಾಜು. ಎಂ
ಶಾಖಾಧಿಕಾರಿ, ಸಾರಿಗೆ ಶಾಖೆ–1
ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, 1ನೇ ಮಹಡಿ, ಕೊಠಡಿ ಸಂಖ್ಯೆ: 101,
ಬಹುಮಹಡಿ ಕಟ್ಟಡ, ಬೆಂಗಳೂರು – 560 001, ದೂರವಾಣಿ ಸಂ: 080–22032914.

(3) ಶ್ರೀ ವಿ.ಎಸ್.ಉಮಾದೇವಿ,
ಶಾಖಾಧಿಕಾರಿ, ಸಮನ್ವಯ ಶಾಖೆ
ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, 1ನೇ ಮಹಡಿ, ಕೊಠಡಿ ಸಂಖ್ಯೆ: 101,
ಬಹುಮಹಡಿ ಕಟ್ಟಡ, ಬೆಂಗಳೂರು – 560 001, ದೂರವಾಣಿ ಸಂ: 080–22032336.

3) ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮಗಳು ಮತ್ತು ಇತರ ವಿವರಗಳು:

1) **ಶ್ರೀ ಎಸ್.ನಾರಾಯಣಸ್ವಾಮಿ**
ಹಿರಿಯ ಸಹಾಯಕರು, ಸಾರಿಗೆ–2 ಶಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ, ಕೊಠಡಿ ಸಂಖ್ಯೆ:122, 1ನೇ ಮಹಡಿ,
ಬಹುಮಹಡಿ ಕಟ್ಟಡ, ಬೆಂಗಳೂರು–01, ದೂರವಾಣಿ ಸಂ:080–22032014.

2) **ಶ್ರೀ ಪಿ.ಶಿವಕೇಶವ**
ಸಹಾಯಕರು, ಸಾರಿಗೆ–1 ಶಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ, ಕೊಠಡಿ ಸಂಖ್ಯೆ:101, 1ನೇ ಮಹಡಿ,
ಬಹುಮಹಡಿ ಕಟ್ಟಡ, ಬೆಂಗಳೂರು–01, ದೂರವಾಣಿ ಸಂ:080–22032914.

(xvii) ಗೊತ್ತುಪಡಿಸಬಹುದಾದಂತಹ ಇತರೆ ಮಾಹಿತಿ

– ಇಲ್ಲ –

P.R. 747
SC - 200

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಬೀರೇಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 97 ಐಎಂಎಂ 2015, ಬೆಂಗಳೂರು, ದಿನಾಂಕ : 17–07–2015

ದಿನಾಂಕ : 01–01–2015ರಲ್ಲಿದ್ದಂತೆ ಔಷಧ ನಿಯಂತ್ರಣ ಇಲಾಖೆಯ ಅಪರ ಔಷಧ ನಿಯಂತ್ರಕರ (ವೇತನ ಶ್ರೇಣಿ ರೂ. 40,050–56,550) ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಬಾಧಿತರು ತಮ್ಮ ಆಕ್ಷೇಪಣೆಗಳೇನಾದರು ಇದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆಯನ್ನು ಲಿಖಿತ ಮೂಲಕ ಪೂರಕ ದಾಖಲೆಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೊದಲನೇ ಮಹಡಿ, ವಿಕಾಸಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಬರುವಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ).

ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 97 ಐಎಂಎಂ 2015, ಬೆಂಗಳೂರು, ದಿನಾಂಕ : 17–07–2015ಕ್ಕೆ ಅನುಬಂಧ ಔಷಧ ನಿಯಂತ್ರಣ ಇಲಾಖೆಯ ಅಪರ ಔಷಧ ನಿಯಂತ್ರಕರ ವೃಂದದ ದಿನಾಂಕ : 01–01–2015ರಲ್ಲಿದ್ದಂತೆ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

ಕ್ರ. ಸಂ.	ಹೆಸರು ಶ್ರೀ/ಶ್ರೀಮತಿ	ನೇರ ನೇಮಕಾತಿ/ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8
1.	ಬಾಗೋಜಿ ಟಿ. ಖಾನಾಪುರೆ (ಪ.ಜಾ)	ಮುಂಬಡ್ತಿ	24–7–1964	15–10–1991	26–08–2014	26–08–2014	–

P.R. 748
SC - 25

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ ಮತ್ತು ಸಮನ್ವಯ).

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 98 ಐಎಂಎಂ 2015, ಬೆಂಗಳೂರು, ದಿನಾಂಕ : 17–07–2015

ದಿನಾಂಕ : 01–01–2015ರಲ್ಲಿದ್ದಂತೆ ಔಷಧ ನಿಯಂತ್ರಣ ಇಲಾಖೆಯ ಉಪ ಔಷಧ ನಿಯಂತ್ರಕರ (ವೇತನ ಶ್ರೇಣಿ ರೂ. 36,300–53,850) ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಬಾಧಿತರು ತಮ್ಮ ಆಕ್ಷೇಪಣೆಗಳೇನಾದರು ಇದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆಯನ್ನು ಲಿಖಿತ ಮೂಲಕ ಪೂರಕ ದಾಖಲೆಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೊದಲನೇ ಮಹಡಿ, ವಿಕಾಸಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಬರುವಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ).

ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 98 ಐಎಂಎಂ 2015, ಬೆಂಗಳೂರು, ದಿನಾಂಕ : 17–07–2015ಕ್ಕೆ ಅನುಬಂಧ

ಔಷಧ ನಿಯಂತ್ರಣ ಇಲಾಖೆಯ ಉಪ ಔಷಧ ನಿಯಂತ್ರಕರ ವೃಂದದ ದಿನಾಂಕ : 01–01–2015ರಲ್ಲಿದ್ದಂತೆ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

ಕ್ರ. ಸಂ.	ಹೆಸರು ಶ್ರೀ/ಶ್ರೀಮತಿ	ನೇರ ನೇಮಕಾತಿ/ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8
1.	ಹಿರೋಳಿ ರೇವಣಸಿದ್ದಪ್ಪ (ಪ.ಜಾ)	ಮುಂಬಡ್ತಿ	27–5–1965	15–10–1991	27–12–2005	27–12–2005	–

2.	ಹೆಚ್. ಶ್ರೀನಿವಾಸ್ (ಪ.ಜಾ)	ಮುಂಬಡ್ತಿ	23–3–1960	15–10–1991	17–5–2013	1–6–2010	–
3.	ಡಾ॥ ಎನ್. ವಡಿವೇಲು	ಮುಂಬಡ್ತಿ	5–10–1955	19–7–1982	01–6–2010	1–6–2010	–
4.	ಎಂ.ಎ.ವಿ. ಅನ್ಸಾರಿ	ಮುಂಬಡ್ತಿ	23–4–1957	19–7–1982	27–1–2014	27–1–2014	–
5.	ಬಿ.ಪಿ. ಅರುಣ್	ಮುಂಬಡ್ತಿ	14–5–1962	15–10–1991	29–5–2014	29–05–2014	–
6.	ದೀಪಕ್ ಎನ್. ಗಾಯಕ್‌ವಾಡ್	ಮುಂಬಡ್ತಿ	14–11–1962	4–8–1993	29–5–2014	29–5–2014	–
7.	ಅಮರೇಶ ತುಂಬಗಿ	ಮುಂಬಡ್ತಿ	1–4–1964	23–4–1993	29–5–2014	29–5–2014	–
8.	ಎಸ್. ಉಮೇಶ್ (ಪ.ಜಾ)	ಮುಂಬಡ್ತಿ	18–5–1968	4–12–1995 (ಪದವೀಧರ ಫಾರ್ಮಾಸಿಸ್ಟ್) 22–6–1998 (ಔಷಧ ಪರಿವೀಕ್ಷಕರು)	29–5–2014	29–5–2014	–
9.	ನಜೀರ್ ಅಹಮದ್	ಮುಂಬಡ್ತಿ	1–6–1966	24–4–1993	29–5–2014	29–5–2014	–

P.R. 749
SC - 25

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ ಮತ್ತು ಸಮನ್ವಯ).

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 103 ಐಎಂಎಂ 2015, ಬೆಂಗಳೂರು, ದಿನಾಂಕ : 16–07–2015

ದಿನಾಂಕ : 01–01–2015ರಲ್ಲಿದ್ದಂತೆ ಔಷಧ ನಿಯಂತ್ರಣ ಇಲಾಖೆಯ ಸಹ ಪ್ರಾಧ್ಯಾಪಕರ (ವೇತನ ಶ್ರೇಣಿ ರೂ. 37,400–67,000) ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಬಗ್ಗೆ ಬಾಧಿತರು ತಮ್ಮ ಆಕ್ಷೇಪಣೆಗಳೇನಾದರು ಇದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆಯನ್ನು ಲಿಖಿತ ಮೂಲಕ ಪೂರಕ ದಾಖಲೆಗಳೊಂದಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಬರುವಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ).

ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 103 ಐಎಂಎಂ 2015, ಬೆಂಗಳೂರು, ದಿನಾಂಕ : 16–07–2015ಕ್ಕೆ ಅನುಬಂಧ

ಔಷಧ ನಿಯಂತ್ರಣ ಇಲಾಖೆಯ ಸಹ ಪ್ರಾಧ್ಯಾಪಕರ ವೃಂದದ ದಿನಾಂಕ : 01–01–2015ರಲ್ಲಿದ್ದಂತೆ, ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

ಕ್ರ. ಸಂ.	ಹೆಸರು ಶ್ರೀ/ಶ್ರೀಮತಿ	ನೇರ ನೇಮಕಾತಿ/ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ನೇಮಕಾತಿಗೆ/ಜ್ಯೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1	2	3	4	5	6	7	8
	ಫಾರ್ಮಾಸ್ಯೂಟಿಕಲ್ ಕೆಮಿಸ್ಟ್ರಿ						
1.	ಡಾ॥ ಜೆ. ಚಂದ್ರಶೇಖರ್	ಮುಂಬಡ್ತಿ	5–2–1964	3–2–1997	22–9–2005	22–9–2005	–

2.	ಡಾ॥ ಕಲಸ್ಕರ್ ಗುರುನಾಥ್ (ಪ.ಜಾ)	ಮುಂಬಡ್ತಿ	1–6–1969	3–2–1997	22–9–2005	22–9–2005	–
	ಫಾರ್ಮಾಸ್ಯೂಟಿಕ್ಸ್						
1.	ಬಿ.ಪಿ. ಮಂಜುಳ	ಮುಂಬಡ್ತಿ	6–4–1964	15–9–1998	22–9–2005	22–9–2005	–
2.	ಡಾ॥ ಸತೀಶ ಬಾಬು ಬಿ.ಕೆ.	ನೇರ ನೇಮಕಾತಿ	14–4–1968	14–1–2011	14–1–2011	14–1–2011	–
	ಫಾರ್ಮಾಕಾಲಜಿ						
1.	ಡಾ॥ ಚಂದ್ರಶೇಖರ ಮಲ್ಲಣ್ಣ ಸುಲ್ತಾನಪುರ	ನೇರ ನೇಮಕಾತಿ	13–6–1967	22–10–1999 (ಜೂನಿಯರ್ ಕೆಮಿಸ್ಟ್) 05–06–2008	5–6–2008	5–6–2008	–
	ಫಾರ್ಮಾಕಾಗ್ನಸಿ						
1.	ಡಾ॥ ರೂಪಶ್ರೀ ಟಿ.ಎಸ್.	ನೇರ ನೇಮಕಾತಿ	22–7–1976	14–1–2011	14–1–2011	14–1–2011	–

P.R. 758
SC - 25

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ ಮತ್ತು ಸಮನ್ವಯ).

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

(ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ)

ಹೆಚ್ಚುವರಿ ಅಧಿಸೂಚನೆ

ಸಂಖ್ಯೆ: ಲೋಇ/37/ಇಎಪಿ/2010/ ಬೆಂಗಳೂರು, ದಿನಾಂಕ: 17–04–2015.

ಕರ್ನಾಟಕ ಹೆದ್ದಾರಿ ಕಾಯ್ದೆ 1964 ಕಲಂ 15ರ ಮೇರೆಗೆ ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ನವಿಲುಗುಡ್ಡ ಗ್ರಾಮದ ಈ ಕೆಳಕಂಡ ಷಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮನಗೂಳಿ–ಬಿಚ್ಚಾಲ ರಾಜ್ಯ ಹೆದ್ದಾರಿ 61 ರ ಚೈನೇಜ್ 123.35 ರಿಂದ 155.80 ರವರೆಗೆ (ಲಿಂಕ್ ಸಂಖ್ಯೆ 13 ಎ ತಿಂತಿಣಿ–ದೇವದುರ್ಗ–ಕಲ್ಮಲಾ ಕ್ರಾಸ್) ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಹೆಚ್ಚುವರಿಯಾಗಿ ಅವಶ್ಯವಿರುತ್ತದೆ ಎಂಬುದಾಗಿ ಭೂಸ್ವಾಧೀನ ಬಾಬ್ತು ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಹೆಚ್ಚುವರಿ ಜಮೀನು ಈ ರಾಜ್ಯ ಹೆದ್ದಾರಿಯ ಭಾಗಶಃ ಉದ್ದಕ್ಕೆ ಅಭಿವೃದ್ಧಿ ಪಡಿಸಲು ಅವಶ್ಯವಾಗಿದೆಯೆಂದು ಸರ್ಕಾರವು ಮನಗಂಡು ಈ ಕೆಳಕಂಡ ಷಡ್ಯೂಲ್‌ನಲ್ಲಿ ವಿವರಿಸಿರುವ ಜಮೀನು ಭೂಸ್ವಾಧೀನಕ್ಕೆ ಈ ಮೂಲಕ ಅಧಿಸೂಚನೆ ಹೊರಡಿಸಲಾಗಿದೆ. ಕರ್ನಾಟಕ ಹೆದ್ದಾರಿ ಕಾಯ್ದೆ 1964 ರ ಅಡಿಯಲ್ಲಿ ಈ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿ ಅಥವಾ ಯೋಜನಾ ನಿರ್ದೇಶಕರು ಪರವಾಗಿ ಪ್ರತಿನಿಧಿಸುವವರನ್ನು ತಡೆಯುವುದಾಗಲಿ ಅಥವಾ ಅಡ್ಡಿಪಡಿಸುವುದಾಗಲಿ ಮಾಡಕೂಡದೆಂದು ಈ ಜಮೀನುಗಳಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಈ ಅಧಿಸೂಚನೆ ಪ್ರಕಟಣೆಯಾದ ನಂತರ ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ರವರ ಅನುಮತಿಯಿಲ್ಲದೇ ಸದರಿ ಜಮೀನುಗಳನ್ನು ವಿಲೇ ಮಾಡುವ ಒಪ್ಪಂದದ ಕ್ರಯ, ಕರಾರು, ಬೋಗ್ಯ ಲೀಜ್, ಅದಲು–ಬದಲು ವಗೈರೆ ಮಾಡುವಂತಿಲ್ಲ. ಸದರಿ ಜಮೀನಿನಲ್ಲಿ ಈ ಅಧಿಸೂಚನೆ ಪ್ರಕಟಣೆಯ ನಂತರ ಯಾವುದೇ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಒಂದು ವೇಳೆ ಮಾಡಿದ್ದರೂ ಪರಿಹಾರ ಹಣ ನಿಗದಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

ಸದರಿ ಜಮೀನುಗಳ ವಿವರಗಳನ್ನು ಪರಿಶೀಲನೆಗಾಗಿ ವಿಶೇಷ ಜಿಲ್ಲಾಧಿಕಾರಿಗಳು (ಭೂಸ್ವಾಧೀನ), ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು, ಸಹಾಯಕ ಆಯುಕ್ತರು (ಭೂಸ್ವಾಧೀನ), ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಬೆಳಗಾವಿ ವಿಭಾಗ ಮತ್ತು ಸಂಬಂಧಪಟ್ಟ ತಹಶೀಲ್ದಾರ ರವರ ಕಚೇರಿಯಲ್ಲಿ ಇಡಲಾಗಿದೆ.

ಷೆಡ್ಯೂಲ್

ಗ್ರಾಮ: ನವಿಲುಗುಡ್ಡ ಹೋಬಳಿ: ಜಾಲಹಳ್ಳಿ ತಾಲ್ಲೂಕ: ದೇವದುರ್ಗ ಜಿಲ್ಲೆ: ರಾಯಚೂರು

ಕ್ರ. ಸಂ	ಪಹಣಿಯಂತೆ ಖಾತೆದಾರರ ಹೆಸರು ಶ್ರೀಯುತರು/ಶ್ರೀಮತಿ	ಆಕಾರ ಬಂದಿನಂತೆ ಜಮೀನಿನ ವಿವರ					ಆಕಾರ	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ			ಆಕಾರ	ಚಕ್ಕುಬಂದಿ				ಪಹಣಿಯಂತೆ ಒಟ್ಟು ವಿಸ್ತೀರ್ಣ ಎ–ಗುಂ
		ಸ.ನಂ.	ತರಹೆ	ಒಟ್ಟು ವಿಸ್ತೀರ್ಣ ಎ–ಗು	ಖರಾಬು ಎ–ಗುಂ	ಉಳಿಕೆ ಎ–ಗುಂ		ಐನು ಎ–ಗುಂ	ಖರಾಬು ಎ–ಗುಂ	ಒಟ್ಟು ಎ–ಗುಂ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	**2**	**3**	**4**	**5**	**6**	**7**	**8**	**9**			**10**	**11**	**12**	**13**	**14**	**15**
1	* ದೇವಮ್ಮ ಗಂ. ವೆಂಕೋಬರಾಯ ಮೇಟಿ * ಶಿವಣ್ಣ ತಂ. ತಮ್ಮಯ್ಯ * ಬಾಲಯ್ಯ ತಂ. ಕೃಷ್ಣಪ್ಪ * ಸಾಹೇಬಗೌಡ ತಂ. ಮಲ್ಲಯ್ಯ * ವೆಂಕನಗೌಡ ಪಾಟೀಲ್ ತಂ. ರಾಮನಗೌಡ ಪಾಟೀಲ್ * ಹನುಮಗೌಡ ತಂ. ಮಲ್ಲಯ್ಯ * ಶಿವನಗೌಡ ತಂ ಮಲ್ಲಯ್ಯ * ಮಲ್ಲಣ್ಣ ತಂ. ರಾಮಣ್ಣ * ಭೀಮರಾಯ ತಂ. ಸಾಬಗೌಡ * ದೇವೇಂದ್ರ ತಂ. ಸಾಬಗೌಡ	2	ಖುಷ್ಕಿ	10–07	1–37	8–10	11–63	0–25 0–13	–	0–25 0–13	0–40	ಹಳ್ಳ	ರಸ್ತೆ	47 ರ ಉಳಿದ ಭಾಗ	ಸ.ನಂ.4 8	10–07
	ಒಟ್ಟು							**0–38**		**0–38**						

ಘೋಷ್ವಾರೆ

ಕ್ರ.ಸಂ.	ಗ್ರಾಮದ ಹೆಸರು	ಹೋಬಳಿ	ತಾಲ್ಲೂಕು	ಜಿಲ್ಲೆ	ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ವಿಸ್ತೀರ್ಣ		
					ಐನು ಎ–ಗುಂ	ಖರಾಬು ಎ–ಗುಂ	ಒಟ್ಟು ಎ–ಗುಂ
1	**2**	**3**	**4**	**5**	**6**	**7**	**8**
1	ನವಿಲುಗುಡ್ಡ	ಜಾಲಹಳ್ಳಿ	ದೇವದುರ್ಗ	ರಾಯಚೂರು	0–25	–	0–25
					0–13	–	0–13
				ಒಟ್ಟು	**0–38**	–	**0–38**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಇಂ.ವಿಜಯ್. ಭೀ.ಚಂದಾಪುರ

ಸರ್ಕಾರದ ಅಧೀನ ಕಾರ್ಯದರ್ಶಿ,

ಬಾಹ್ಯ ಅನುದಾನಿತ ಯೋಜನೆಗಳು (EAP)

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ.

P.R. 831

SC - 200

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ಸಂಖ್ಯೆ: ಸಿಐ 65 ಎಸ್‌ಪಿಕ್ಯೂ 2015 ಬೆಂಗಳೂರು, ದಿನಾಂಕ: 20.07.2015

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ಕಲಂ 28(4)ರಡಿ ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 (ಕರ್ನಾಟಕ ಕಾಯ್ದೆ 1966) (ಈ ಮುಂದೆ ಪ್ರಸ್ತುತ ಕಾಯ್ದೆ ಎಂದು ಹೇಳಲಾಗಿದೆ) ಕಲಂ 28(1) ರನ್ವಯ ದತ್ತವಾದ ಅಧಿಕಾರದ ಮೇರೆಗೆ ದಿನಾಂಕ: 06.09.2013ರ ಕರ್ನಾಟಕ ರಾಜ್ಯ ಪತ್ರದ ಭಾಗ-3 ನಂ. 1119ರ ಪುಟ ಸಂಖ್ಯೆ 1 ರಿಂದ 4 ರಲ್ಲಿ ಪ್ರಕಟವಾಗಿರುವ ಅಧಿಸೂಚನೆ ಸಂಖ್ಯೆ: ಸಿಐ 239 ಎಸ್‌ಪಿಕ್ಯೂ 2013 ದಿನಾಂಕ: 06.09.2013ರ ಪ್ರಕಾರ ಸರ್ಕಾರವು ಪ್ರಸ್ತುತ ಅಧಿಸೂಚನೆಯಲ್ಲಿ ಕಾಣಿಸಿರುವ ಜಮೀನುಗಳನ್ನು ಮಂಡಳಿ ವತಿಯಿಂದ ಕೈಗಾರಿಕಾ ಸ್ಥಾಪಿಸುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಇಚ್ಛಿಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಅನುಸೂಚಿಯಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿರುವ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಳ್ಳಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ದಿಶೆಯಲ್ಲಿ ಮೇಲ್ಕಂಡ ಕಾಯ್ದೆಯ ವಿಧಿ 28(3)ರ ಅಡಿ ಕೆಐಎಡಿಬಿ, ವಿಶೇಷ ಭೂಸ್ವಾಧೀನಾಧಿಕಾರಿಗಳು ತಮಗೆ ನಿಹಿತವಾಗಿರುವ ಅಧಿಕಾರವನ್ನು ಚಲಾಯಿಸಿ ಆದೇಶ ಹೊರಡಿಸಿದ್ದಾರೆ.

ಆದುದರಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 (ಕರ್ನಾಟಕ ಕಾಯ್ದೆ 18: 1966)ರ ಕಲಂ 28ರ ಉಪ ಕಲಂ (4)ರಡಿ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರ ಈ ಕೆಳಗೆ ನಮೂದಿಸಿರುವ ಜಮೀನುಗಳನ್ನು ಅಧಿಸೂಚನೆಯಲ್ಲಿ ತಿಳಿಸಿರುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

ಅನುಸೂಚಿ

ಗ್ರಾಮ: ಸಾರಥಿ **ಹೋಬಳಿ: ಕಸಬಾ** **ತಾಲ್ಲೂಕು: ಹರಿಹರ** **ಜಿಲ್ಲೆ: ದಾವಣಗೆರೆ**

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ಸ್ವಾಧೀನಪಡಿಸಿಕೊಳ್ಳುತ್ತಿರುವ ವಿಸ್ತೀರ್ಣ			ಆಕಾರ (ರೂ)	ತರಹೆ	ಚೆಕ್ಕುಬಂದಿ			
				ಜುಮ್ಲಾ ಎ-ಗುಂ	ಖರಾಬು ಎ-ಗುಂ	ನಿವ್ವಳ ಎ-ಗುಂ			ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ.	ದಕ್ಷಿಣ ಸ.ನಂ.
1	2	3	4	5	6	7	8	9	10	11	12	13
1	ಸತ್ಯನಾರಾಯಣ ಬಿನ್ ಸಿಂಹಾಚಲರೆಡ್ಡಿ	ಸ್ವಂತ	97/1ಎ2	0-11	0-01	0-10	0-28	ಖುಷ್ಕಿ	97/1ಎ3	97/1ಎ1	112	ಬಂಡಿದಾರಿ
2	ಸತ್ಯನಾರಾಯಣ ಬಿನ್ ಸಿಂಹಾಚಲರೆಡ್ಡಿ	ಸ್ವಂತ	97/1ಎ3	0-11	0-01	0-10	0-28	ಖುಷ್ಕಿ	96	97/1ಎ2	112	ಬಂಡಿದಾರಿ
3	1) ಹನುಮಂತಪ್ಪ ಬಿನ್ ಹುಚ್ಚಪ್ಪ ಎಳೆಹೊಳೆ 2) ಕೆ. ಹುಚ್ಚಪ್ಪ ಬಿನ್ ಕಮದೋಡು ಹನುಮಂತಪ್ಪ	ಸ್ವಂತ	107/1	3-33	–	3-33	4-34	ಖುಷ್ಕಿ	108 & 109	128	107/2	107/3
4	ಕರ್ನಾಟಕ ರಾಜಪ್ರಮುಖರು	ಸ್ವಂತ	107/2	1-02	–	1-02	1-19	ಖುಷ್ಕಿ	109	ಹಳ್ಳ	120	107/1
5	ನಿಂಗಪ್ಪ ಬಿನ್ ಚಿಕ್ಕಪ್ಪ	ಸ್ವಂತ	107/3	3-37	0-03	3-34	4-34	ಖುಷ್ಕಿ	108	128	107/1	106
6	ಎ. ಡಿ. ಪಕ್ಕೀರಪ್ಪ ಬಿನ್ ಹನುಮಂತಪ್ಪ ಚಲುವಾದಿ	ಸ್ವಂತ	119	4-29	–	4-29	6-15	ಖುಷ್ಕಿ	108	120	140, ಹಳ್ಳ	120
7	1) ಎಂ. ಎನ್. ಪ್ರದೀಪ್ ಬಿನ್ ಎಂ. ನಾಗರಾಜಪ್ಪ 2) ಎಂ. ಎನ್. ಚೇತನ್ ಬಿನ್. ಎಂ. ನಾಗರಾಜಪ್ಪ	ಸ್ವಂತ	140	1-07	–	1-07	1-43	ಖುಷ್ಕಿ	119	120	ಹಳ್ಳ	119
			ಒಟ್ಟು:	**15-10**	**0-05**	**15-05**						

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ಮಹಾದೇವ

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

PR. 760

SC. 65

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59